MVC No. 500/2022 - -

RW – 3

ದಿನಾಂಕಃ 10.06.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದ –

ತಾಃ 18.2.2017 ರಂದು ನನ್ನ ತಂದೆ ನಾರಾಯಣಪ್ಪ ಮರಣ ಹೊಂದಿರುತ್ತಾರೆ ಎಂದೆ ಸರಿ. ನನ್ನ ತಂದೆಯ ಮರಣ ಪ್ರಮಾಣ ಪತ್ರದ ನೋಟರಿಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ತಾಃ 02.03.2022 ರಂದು ಈ ಅಪಘಾತವಾಗಿರುತ್ತದೆ. ನಮ್ಮ ತಂದೆ ಮರಣಾ ನಂತರವು ಸಹ ಮೋಟಾರ್ ಸೈಕಲ್ ನ ವಿಮಾ ಪಾಲಿಸಿ ಯನ್ನು ನಮ್ಮ ತಂದೆ ಹೆಸರಿಲ್ಲಿಯೇ ಕಟ್ಟಿಕೊಂಡು ಹೋಗುತ್ತಿದ್ದೇವೆ ಎಂದರೆ ಸರಿ. ಮೋಟಾರ್ ಸೈಕಲ್ ನ್ನು ನನ್ನ ಅಳಿಯ ಠಾಣೆಯಿಂದ ಬಿಡಿಸಿಕೊಂಡು ಬಂದಿರುತ್ತಾರೆ. ನಮ್ಮ ತಂದೆ ಮರಣ ಹೊಂದಿದ ಬಗ್ಗೆ ವಿಮಾ ಕಂಪನಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ನಮ್ಮ ತಂದೆ ಮರಣ ಹೊಂದಿದ ವಿಚಾರವನ್ನು ವಿಮಾ ಕಂಪನಿಗೆ ತಿಳಿಸದೇ ಇದ್ದ ಕಾರಣ 3 ನೇ ಎದುರುದಾರ ಕಂಪನಿಯವರು ಯಾವುದೇ ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

ಸದರಿ ಅಪಘಾತದ ಬಗ್ಗೆ ನನ್ನ ಹೆಂಡತಿ ಪಕ್ಕೀರಪ್ಪ ಎಂಬುವವರ ವಿರುದ್ದ ದೂರು ನೀಡಿದ್ದಾರೆ ಎಂದರೆ ಸರಿ. ಸದರಿ ಅಪಘಾತವನ್ನು ತಪ್ಪಿಸಲು ಪಕ್ಕೀರಪ್ಪ ಯಾವುದೇ ಪ್ರಯತ್ನಪಟ್ಟಿರುವುದಿಲ್ಲ. ನಿಪಿ–3 ನಕಾಶೆ ಪ್ರಕಾರ ಅಪಘಾತವಾದ ಸ್ಥಳದಲ್ಲಿ ವಾಹನ ಸಂಚಾರ ಮಾಡಲು ಸ್ಥಳ ಇತ್ತು ಎಂದರೆ ಸರಿ. ಸದರಿ ಅಪಘಾತವು ಪಕ್ಕೀರಪ್ಪನ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿ. ಅದೇ ಕಾರಣಕ್ಕೆ ನಾವು ಪಕ್ಕೀರಪ್ಪನ ವಿರುದ್ದ ಎಂ ವಿ ಸಿ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ